# ಸಂಪಾದಕೀಯ

ಸಮಾಜವು ಹರಿಯುವ ನೀರಿನಂತೆ ನಿರಂತರವಾಗಿ ಚಲನಶೀಲಸ್ವರೂಪವುಳ್ಳದ್ದು. ಕಾಲ ಗತಿಸುತ್ತಾ ಹೋದಂತೆ ಸಹಜವಾಗಿ ಸಮಾಜದಲ್ಲಿ ಬದಲಾವಣೆಗಳಾಗುತ್ತ ಸಾಗುತ್ತವೆ. "ಬದಲಾವಣೆ ಜಗದ ನಿಯಮ" ಎಂಬುದು ನಮಗೆಲ್ಲರಿಗೂ ತಿಳಿದಿರುವ ಸಂಗತಿ.

ಸ್ತ್ರೀ- ಪುರುಷರು ಸಮಾಜವೆಂಬ ಬಂಡಿಯ ಚಕ್ರಗಳಿದ್ದಂತೆ. ಇಬ್ಬರೂ ಒಗ್ಗೂಡಿ ಕೆಲಸ ಮಾಡಿದಾಗ ಸದೃಢ ಸಮಾಜ ನಿರ್ಮಾಣಗೊಳ್ಳುವುದು ಸಾಧ್ಯ. ಸಾಂಪ್ರದಾಯಿಕ ಆಲೋಚನೆ ಹಾಗೂ ಪುರುಷ ಪ್ರಧಾನ ವ್ಯವಸ್ಥೆಯ ಪ್ರಾಬಲ್ಯದ ಕಾರಣಕ್ಕಾಗಿ ಮಹಿಳೆಯರು ಅನೇಕ ಅವಕಾಶಗಳಿಂದ ವಂಚಿತರಾಗಿದ್ದರು. ವಚನ ಸಾಹಿತ್ಯದ ಕಾಲಘಟ್ಟ ಅವರಿಗೆ ಅವಕಾಶಗಳು ಹಾಗೂ ಸ್ವಾತಂತ್ರ್ಯದ ಹೊಸ ದಾರಿಯನ್ನು ತೆರೆಯಿತು.

ಮೊಲೆ ಮುಡಿ ಬಂದಡೆ ಹೆಣ್ಣೆಂಬರು
ಗಡ್ಡ ಮೀಸೆ ಬಂದಡೆ ಗಂಡೆಂಬರು
ನಡುವೆ ಸುಳಿವಾತ್ಮನು ಗಂಡು ಅಲ್ಲ
ಹೆಣ್ಣು ಅಲ್ಲ ರಾಮನಾಥ.

ಗಂಡು ಹೆಣ್ಣಿನ ಮಧ್ಯದ ವ್ಯತ್ಯಾಸಗಳು ಭೌತಿಕ ಶರೀರಕ್ಕೆ ಸಂಬಂಧಿಸಿದವುಗಳೇ ಹೊರತು ಆತ್ಮಕ್ಕೆ ಸಂಬಂಧಿಸಿದಂತೆ ಇಬ್ಬರಲ್ಲೂ ಯಾವುದೇ ವ್ಯತ್ಯಾಸವಿಲ್ಲ. ಈ ನೆಲೆಯಲ್ಲಿ ಆದ್ಯ ವಚನಕಾರ ಜೇಡರ ದಾಸಿಮಯ್ಯ ಸಮಾನತೆಯ ತತ್ವವನ್ನು ಸಾರಿ ಹೇಳಿದ್ದಾನೆ.

ನಮ್ಮ ಮೂಲ ಉದ್ಯೋಗವಾದ ಕೃಷಿಯ ಬೆನ್ನೆಲುಬಿನಂತಿರುವ ಮಹಿಳೆಯು ಇಂದು ಆಧುನಿಕ ಸಂದರ್ಭದಲ್ಲಿ ಉನ್ನತ ಶಿಕ್ಷಣ ಪಡೆದು ಹಲವು ಕ್ಷೇತ್ರಗಳಲ್ಲಿ ದಾಪುಗಾಲಿಡುವ ಮೂಲಕ ಸಮಾಜದ ಏಳಿಗೆಯಲ್ಲಿ ರಚನಾತ್ಮಕ ಪಾತ್ರವನ್ನು ವಹಿಸುತ್ತಿದ್ದಾಳೆ.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯು ಪ್ರತಿ ವರ್ಷ ಮಾರ್ಚ್ ೦೮ರಂದು ಮಹಿಳಾ ಹಕ್ಕುಗಳ ಚಳುವಳಿಯ ಕೇಂದ್ರಬಿಂದುವಾಗಿ ಆಚರಿಸಲ್ಪಡುತ್ತದೆ. ಆಧುನಿಕ ಪ್ರಜಾಪ್ರಭುತ್ವದ ಆಶಯದಂತೆ ಸ್ತ್ರೀಯರಿಗೂ ಪುರುಷರಷ್ಟೇ ಸಮಾನ ಅವಕಾಶಗಳು ದೊರೆಯಬೇಕೆಂಬುದು ಸಹಜ ಸಂಗತಿ.

ಈ ದಿಸೆಯಲ್ಲಿ ಹಲವು ಬದಲಾವಣೆಗಳುಂಟಾಗಿ ಮಹಿಳೆಯರು ಯಾವುದೇ ನಿರ್ದಿಷ್ಟ ವೃತ್ತಿಗೆ ಸೀಮಿತವಾಗದೇ ಹಲವು ಬಗೆಯ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕ್ರೀಡೆಯ ವಿಷಯವನ್ನು ತೆಗೆದುಕೊಳ್ಳುವುದಾದರೆ ಭಾರತದಲ್ಲಿ ಪುರುಷ ವಿಭಾಗದಲ್ಲಿ ಮಾತ್ರ ಆದ್ಯತೆಯಿದ್ದ ಕುಸ್ತಿ, ಕ್ರಿಕೆಟ್ ಮೊದಲಾದ ಕ್ರೀಡೆಗಳಲ್ಲಿ ಇಂದು ಮಹಿಳೆಯರ ಪ್ರತಿಭೆಗೆ ಆದ್ಯತೆ ದೊರೆತು ಅವರು ಗಮನಾರ್ಹ ಸಾಧನೆ ಮಾಡುತ್ತಿರುವುದು ಆಶಾದಾಯಕ ಬೆಳವಣಿಗೆ. ಆದಾಗ್ಯೂ ಈ ನೆಲೆಯಲ್ಲಿ ಇನ್ನಷ್ಟು ಪ್ರಗತಿಯ ಅಗತ್ಯವಿದೆ ಎಂಬುದರಲ್ಲಿ ಎರಡು ಮಾತಿಲ್ಲ.

ಸಮಾಜದಲ್ಲಿ ತಮ್ಮ ಅನನ್ಯತೆ ಹಾಗೂ ಸಾಧನೆಗಳ ಮೂಲಕ ಪ್ರೇರಣೆಯಾಗಿ ನಿಂತಿರುವ ಎಲ್ಲ ಮಹಿಳೆಯರಿಗೆ ಅಭಿನಂದನೆಗಳು. ಸರ್ವರಿಗೂ ಮಹಿಳಾ ದಿನಾಚರಣೆಯ ಹಾರ್ದಿಕ ಶುಭಾಶಯಗಳು.

ಅನುಕರ್ಷ್ ತ್ರೈಮಾಸಿಕ ಪತ್ರಿಕೆಯ ಪ್ರಸ್ತುತ ಸಂಚಿಕೆಯು ವೈವಿಧ್ಯಮಯ ಬರಹಗಳಿಂದ ಕೂಡಿದ್ದು, ಓದಿ ಪ್ರತಿಕ್ರಿಯಿಸುವಿರೆಂಬ ನಿರೀಕ್ಷೆ ನಮ್ಮದು. ತಮ್ಮ ಸಲಹೆ-ಸೂಚನೆಗಳಿಗೆ ಸದಾ ಸ್ವಾಗತ.

ವಂದನೆಗಳೊಂದಿಗೆ

ಡಾ. ವಿವೇಕಾನಂದ ಸಜ್ಜನ



anukarsh@alliance.edu.in